ಮೈಸೂರ ಗೆಜಿಟ.

ನಂ. 45 ಸರ್ಕಾರದಿಂದ ಘಾಯಿಷ್ ಆದ್ದು. ಸ್ಸ್ 1884.

ಬೆಂಗಳೂರು, ಶನಿವಾರ, ನವೆಂಬರ್ ತಾ|| 8, ಸ್ಸ್ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಜೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜೀರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್‌ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಣಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ಮೊಕ್ಕಾಂ ಮೈಸೂರು, ತಾರೀಖು 16ನೇ ಅಕ್ಟೋಬರ್ 1884.

ನಂ. 148.—ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತೀ ಬಾಬತು ಗಂಧದ ಮರದ ಸಾಲೀಯನಾ ಹರಾಜುಗಳು ಇದರಡೀಕಂಡ ತಾರೀಖು ವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಡಿ|| ಕಮ್ಮಿಷನರ್ ವ ಫಾರೆಸ್ಟು ಆಫೀಸರ್‌ಗಳಿಂದ ನಡಿಸಲ್ಪಡುತ್ತೆ:—

		ಸ್ವಲ್ಪ ಹೆಚ್ಚು ಕಡಿಮೆಯಾಗಿ ಟ್ಟಿಗಳು.
ಶ್ರೀರಂಗಪಟ್ಟಣ, ತಾರೀಖು 1ನೇ ಡಿಶಂಬರ್ 1884		
ಹುಣಸೂರು, ತಾರೀಖು 4ನೇ ಡಿಟೋ	,,	.. 500
ಬೆಂಗಳೂರು, ತಾರೀಖು 8ನೇ ಡಿಟೋ	,,	.. 280
ಸೊರಬ, ತಾರೀಖು 13ನೇ ಡಿಟೋ	,,	.. 200
ಅನಂತಪುರ, ತಾರೀಖು 18ನೇ ಡಿಟೋ	,,	.. 200
ಶಿವಮೊಗ್ಗ, ತಾರೀಖು 22ನೇ ಡಿಟೋ	,,	.. 500
ತೀರ್ಥಹಳ್ಳಿ, ತಾರೀಖು 7ನೇ ಜನವರೀ 1885		.. 200
ಚಿಕ್ಕಮಗಳೂರು, ತಾ|| 14ನೇ ಡಿಟೋ	,,	.. 200
ಹಾಸನ, ತಾರೀಖು 21ನೇ ಡಿಟೋ	,,	.. 400

ಹರಾಜಿನ ಪರತ್ತುಗಳು.—ಸ್ ೧೮೭೪ನೇ ಇಸವಿ ಡಿಸಂಬರ್ ೫ನೇ ಮತ್ತು ೪೮ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘೋಷಿಸ್ಪಾ ಡಲ್ಪಟ್ಟ ಪ್ರಕಾರ ಇರತಕ್ಕವು, ಮತ್ತು ಹರಾಜ್ ಕಾಲದಲ್ಲಿ ಘೋದಲ್ಪಡುವವು. ತೀರ್ಥಹಳ್ಳಿ, ಚಿಕ್ಕಮಗಳೂರು ಮತ್ತು ಹಾಸನ ಈ ಸ್ಥಳಗಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ ಪಾವತೀ ಬಗ್ಗೆ ನಾಯಿದೆಯು, ೧೮೮೫ನೇ ಇಸವೀ ಮಾರ್ಚೀ ೨೫ನೇ ತಾರೀಖಿಗೆ ಆಖೈರಾಗುವದು.

ತಾರೀಖು 28ನೇ ಅಕ್ಟೋಬರ್ 1884.

ನಂ. 156.—ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟೆ ಕಮ್ಮಿಷನರ್ ಖಾ॥ ಬಹದೂರ್ ಮೆ॥ ಅಬ್ದುಲ್‌ಖಾದರ್ ಯವರು, ೧೮೮೪ನೇ ಇಸವಿ ಅಕ್ಟೋಬರ್ 23ನೇ ಮತ್ತು ಮಿನ ಮಧ್ಯಾನ್ಹಾತ್ಪರ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸೂಪರ್‌ಟೆಂಡೆಂಟ್ ಆಫೀಸ್ ಚಾರ್ಜನ್ನು ಫಾರೆಸ್ಟ್ ಅಸಿಸ್ಟೆಂಟ್ ಕ್ವಸರ್‌ವೇಟರ್ ಮೆ॥ ಸಿ. ನಾರಾಯಣ ರಾಯರಿಗೆ ಬಿಟ್ಟಿಸಿರುತ್ತಾರೆ.

ನಂ. 157.—ಫ್ರೆಂಚ್ ರಾಕ್ಸ್ ಸಬ್‌ಡಿವೀಜ್ಞ ಆಫೀಸರ್ ಮೆ॥ ವಿ. ಪಿ. ಮಾಧವರಾಯರು, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು 7 ದಿವಸಗಳ ಕಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 29ನೇ ಅಕ್ಟೋಬರ್ 1884.

ನಂ. 158.—ಕೋಲಾರ ಡಿಸ್ಟ್ರಿಕ್ಟ್, ಗೋರಿಬಿದನೂರು ತಾಲ್ಲೂಕು ಅಮಲ್‌ದಾರ್ ಕೆ. ಶಾಮಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು ಬಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 159.—ಟೆಲಿಗ್ರಾಫ್ ಮನಿಆರ್‌ಡರಸ್ ಯಾನೆ ತಂತೀ ಮೂಲಕ ಕಳುಹಿಸಲ್ಪಡುವ ಮನಿ ಆರ್ಡರ್‌ಸಿಗೆ ಸಂಬಂಧಪಟ್ಟ ಯಿದರೀ ಕಂಡ ಪೋಸ್ಟಲ್ ನೋಟೀಸು, ಯಿಂಡ್ಯ ದೇಶದ ಪೋಸ್ಟ್ ಆಫೀಸಿನ ಡೈರೆಕ್ಟರ್ ಜನರಲ್ ಯವರಿಂದ ಕೊಡಲ್ಪಟ್ಟು, ಸರ್ವರೆ ತಿಳುವಳಿಕೆ ಬಗ್ಗೆ ಪುನಃ ಪ್ರಕಟಿಸಲ್ಪಡುತ್ತೆ.

ಪೋಸ್ಟಲ್ ನೋಟೀಸ್.—ಟೆಲಿಗ್ರಾಫ್ ಮನಿ ಆರ್ಡರ್‌ಗಳು.

ಸ್ ೧೮೮೪ನೇ ಇಸವಿ ಅಕ್ಟೋಬರ್ 1ನೇ ತಾರೀಖು ಲಾಗಾಯತು, ಟೆಲಿಗ್ರಾಫ್ ಮನಿ ಆರ್ಡರ್‌ಗಳು ಯಲ್ಲ ಮನಿ ಆರ್ಡರ್ ಆಫೀಸುಗಳಲ್ಲೂ ಪಡೆಯಬಹುದು.

2. ಟೆಲಿಗ್ರಾಫ್ ಮನಿ ಆರ್ಡರ್ ಅಂದರೆ ಪೋಸ್ಟ್ ಆಫೀಸ್ ಮೂಲಕ ಬಂದು ಮೊಬಲಗಿನ ಪಾವತೀ ಬಗ್ಗೆ ಪೋಸ್ಟ್ ಆಫೀಸಿನಿಂದ ಕೊಡಲ್ಪಡುವ ಆರ್ಡರ್ ; ಹಣ ಪಾವತೀ ಅಂಶವು ಬಂದು ಪೋಸ್ಟ್‌ಆಫೀಸಿನಿಂದ ಮತ್ತೊಂದು ಪೋಸ್ಟ್‌ಆಫೀಸಿಗೆ ತಂತೀ ವರ್ತಮಾನ ಕೊಡಲ್ಪಟ್ಟು ಮೊಬಲಗು ಸಲ್ಲಬೇಕಾದ ಮನುಷ್ಯನ ವಾಸಸ್ಥಾನದಲ್ಲೇ ಹಣ ಪಾವತೀ ಮಾಡಲ್ಪಡುವದು. ಟೆಲಿಗ್ರಾಫ್ ಮನಿ ಆರ್ಡರುಗಳಿಗೆ ಯಾವ ಮನಿ ಆರ್ಡರ್ ಆಫೀಸಿನಲ್ಲಾಗಲಿ ಹಣ ಪಾವತೀ ಮಾಡಲ್ಪಡುವದು.

*(ಗವರ್ನಮೆಂಟ್ ಯಾನೆ ಭರವಸೆ ಕೊಡಲ್ಪಟ್ಟ ಯಾ ಸಂಸ್ಥಾನದ) ರೇಲ್ವೆ ಟೆಲಿಗ್ರಾಫ್ ಆಫೀಸುಗಳು, ಈ ರೂಲ್ಸಿನ ಅರ್ಥ ರೀತ್ಯ ಗವರ್ನಮೆಂಟ್ ಟೆಲಿಗ್ರಾಫ್ ಆಫೀಸುಗಳಲ್ಲವು.

3. ಮನಿ ಆರ್ಡರು ಕೊಡಲ್ಪಡಬೇಕಾದ ಸ್ಥಳದಲ್ಲಿ ಗವರ್ನಮೆಂಟ್* ಟೆಲಿಗ್ರಾಫ್ ಆಫೀಸು ಯಿಲ್ಲದ ಪಕ್ಷಕ್ಕೆ, ಆರ್ಡರು ಮುಂದಕ್ಕೆ ಟೆಲಿಗ್ರಾಫ್ ಮೂಲಕ ಕಳುಹಿಸಲ್ಪಡತಕ್ಕ ಬಗ್ಗೆ ಅತ್ಯಂತ ಸಮೀಪವಾದ ಗವರ್ನಮೆಂಟ್ ಟೆಲಿಗ್ರಾಫ್ ಆಫೀಸಿಗೆ ಟಪ್ಪಾಲ್ ಮೂಲಕ ಕಳುಹಿಸಲ್ಪಡತಕ್ಕದ್ದು. ಹಣ ಪಾವತೀ ಮಾಡಲ್ಪಡಬೇಕಾದ ಸ್ಥಳದಲ್ಲಿ ಗವರ್ನಮೆಂಟ್ ಟೆಲಿಗ್ರಾಫ್ ಆಫೀಸು ಯಿಲ್ಲದಿದ್ದರೆ, ಆರ್ಡರು ಅತ್ಯಂತ ಸಮೀಪವಾದ ಗವರ್ನಮೆಂಟ್ ಟೆಲಿಗ್ರಾಫ್ ಆಫೀಸಿನಿಂದ ಟಪ್ಪಾಲ್ ಮೂಲಕ ಕಳುಹಿಸಲ್ಪಡತಕ್ಕದ್ದು.

4. ಟೆಲಿಗ್ರಾಫ್ ಮನಿ ಆರ್ಡರ್‌ಗಳ ಮೇಲೆ ಕೊಡಲ್ಪಡಬೇಕಾದ ಜುಸುಮಿನ ದರಗಳು ಇದರಡೀಕಂಡ ಪ್ರಕಾರ ಯಿರತಕ್ಕವು:—

	ರೂ.	ಅ.
ಮೊಬಲಗು ರೂಪಾಯಿ 25ಕ್ಕೆ ಮೇಲ್ಪಡದೆ ಯಿದ್ದರೆ	0	8
ಡಿಟೋ ರೂಪಾಯಿ 25ಕ್ಕೆ ಮೇಲ್ಪಟ್ಟು ರೂಪಾಯಿ 50ಕ್ಕೆ ಮೇಲ್ಪಡದೆ ಇದ್ದರೆ	0	12
ಡಿಟೋ ರೂಪಾಯಿ 50ಕ್ಕೆ ಮೇಲ್ಪಟ್ಟು ರೂ. 75ಕ್ಕೆ ಮೇಲ್ಪಡದೆ ಇದ್ದರೆ	1	2
ಡಿಟೋ ರೂಪಾಯಿ 75ಕ್ಕೆ ಮೇಲ್ಪಟ್ಟು ರೂ. 100ಕ್ಕೆ ಮೇಲ್ಪಡದೆ ಇದ್ದರೆ	1	8
ಡಿಟೋ ರೂಪಾಯಿ 100ಕ್ಕೆ ಮೇಲ್ಪಟ್ಟು ರೂ. 125ಕ್ಕೆ ಮೇಲ್ಪಡದೆ ಇದ್ದರೆ	1	14
ಡಿಟೋ ರೂಪಾಯಿ 125ಕ್ಕೆ ಮೇಲ್ಪಟ್ಟು ರೂ. 150ಕ್ಕೆ ಮೇಲ್ಪಡದೆ ಇದ್ದರೆ	2	4

5. ಹಣ ಪಾವತೀ ಬಗ್ಗೆ ಕೊಡಲ್ಪಡುವ ತಂತೀ ವರ್ತಮಾನಕ್ಕೋಸ್ಕರ, ಕಳುಹಿಸಲ್ಪಡುವ ಹಣದ ಮೊತ್ತವು ಗಣನೆ ಮಾಡದೆ ಪರಂತು ವಬ್ಬ ಮನುಷ್ಯನಿಗೆ ಪಾವತೀ ಮಾಡಲ್ಪಡಬೇಕಾದ ಮೊಬಲಗು 600 ರೂಪಾಯಿಗಳಿಗಿಂತ ಮಿಾರದೆ ಯಿದ್ದರೆ, ಯರಡು ರೂಪಾಯಿ ಯೀಕರೀತಿ ಚಾರ್ಜ್ ಮಾಡಲ್ಪಡುವದು. ಈ ಟೆಲಿಗ್ರಾಫ್‌ಗಳು "ಜರೂರಾಗಿ" ಕಳುಹಿಸಲ್ಪಡುವವು.

6. ಮನಿ ಆರ್ಡರ್ ಫಾರಮಿಗೆ ಲಗತ್ ಯಿರುವ ಕೂರ್ಪಯಾನೆ ಕಾಗದದ ಮೇಲೆ ಹಣ ಕಳುಹಿಸುವವನು ಹಣ ಪಾವತಿಯಾಗುವ ಮನುಷ್ಯನಿಗೆ ತಿಳಿಸಲೇಷ್ಟಿಸುವ ಖಾಸಗಿ ವರ್ತಮಾನವನ್ನು ಬರಿಯಬಹುದು. ಅಂಥಾ ಖಾಸಗಿ ವರ್ತಮಾನವು ಹಣ ಪಾವತೀ ಯಾಗುವದಕ್ಕೆ ಕೊಡುವ ಟೆಲಿಗ್ರಾಫ್ ನೊಂದಿಗೆ ಕೇರಿಸಲ್ಪಟ್ಟು ಮಾತು ಒಂದಕ್ಕೆ 2 ಆಣೆಗಳಂತೆ ಚಾರ್ಜ್ ವಸೂಲ್ಮಾಡಲ್ಪಡುವದು. ಹಣ ಕಳುಹಿಸುವವನು ಟೆಲಿಗ್ರಾಫ್ ಡಿಪಾರ್ಟ್‌ಮೆಂಟಿನ ಚಾಲ್ತಿ ರೂಲ್ಸ್‌ಗಳನುಸರಿಸಿ ಜವಾಬಿನ ಬಗ್ಗೆ ಮುಂದಾಗಿ ಹಣ ಪಾವತೀ ಮಾಡಬಹುದು.

7. ಹಣ ಪಾವತಿಯಾದ ಬಗ್ಗೆ ಟೆಲಿಗ್ರಾಫ್ ಮೂಲಕ ಸರಕಾರಿ ರೀತಿಯನ್ನು ಹಣ ಕಳುಹಿಸುವವನು ಹೊಂದಬಹುದು. ಅಂಥಾ ರೀತಿಬಗ್ಗೆ ಒಂದು ರೂಪಾಯಿ ಚಾರ್ಜ್ ಕೊಡಬೇಕಾಗಿರುತ್ತೆ.

8. ಟೆಲಿಗ್ರಾಫ್ ಮೂಲಕ ಕಳುಹಿಸಲ್ಪಟ್ಟ ಮನಿ ಆರ್ಡರಿನ ಮೊಬಲಗು, ಹಣ ಪಾವತೀ ಮಾಡಬೇಕಾದ ಆಫೀಸಿಗೆ ಟೆಲಿಗ್ರಾಫ್ ವರ್ತಮಾನ ತಲಪಿದ ವಡನೆ ಅಂಚೇ ಜವಾನನ ಮೂಲಕ ಹಣ ಪಾವತೀಯಾಗಬೇಕಾದ ಮನುಷ್ಯನ ವಾಸಸ್ಥಾನದಲ್ಲಿ ಪಾವತೀ ಮಾಡಲ್ಪಡುವದು. ಹಣದ ಸಂಗಡ ತಂತೀ ವರ್ತಮಾನದ ಒಂದು ನಕಲು ಹಣ ಪಾವತೀ ಮಾಡಲ್ಪಡುವ ಮನುಷ್ಯನಿಗೆ ಕೊಡಲ್ಪಡುವದು.

9. ಈ ತಪೇಲ್ ಕಂಡ ರೂಲ್‌ಸಿನ ಕಾಪಿಯು, ಪೋಸ್ಟ್ ಆಫೀಸಿಗೆ ದರಖಾಸ್ತು ಮಾಡಿ ಪಡೆಯಬಹುದು.

ತಾರೀಖು 30ನೇ ಆಕ್ಟೋಬರ್ 1884.

ನಂ. 163.—ಸ್ರ್ 1882ನೇ ಇಸವಿ ಡಿಸಂಬರ್ 9ನೇ ಮುಕ್ತಂ 147ನೇ ನಂಬರ್ ಇಸ್ತಿಹಾರ್ ನಾಮೆಯನ್ನು ಬದಲಾಯಿಸುವದರಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ಗ್ರಾಮಗಳ ವರ್ಗಾವರ್ಗಿಯು ಹುಕುಂ ಮಾಡಲ್ಪಟ್ಟಿರುತ್ತೆ:—

(1) ಆನೇಕಲ್ ತಾಲ್ಲೂಕಿನಿಂದ ಕೃಷ್ಣರಾಜಪುರಕ್ಕೆ ತಾಲ್ಲೂಕಿಗೆ.

ಸೋಮನಹಳ್ಳಿ ಹೋಬಳಿ.

1 ಸೋಮನಹಳ್ಳಿ ..	7 ಹನುಮಂತಪುರ ..	13 ಪೊಗಿಜೂಡಹಳ್ಳಿ
2 ಅಲಕಬಳಲು ..	8 ರಾವಗೊಡ್ಲು ..	14 ಕಾಯಂಗುತ್ತಾ ತಾರಲು
3 ತಾಟ್ಟಕುಪ್ಪೆ (ಬೇಡರಾಕ್) ..	9 ಗಬ್ಬಾಡಿ ..	15 ಕಾಯಂಗುತ್ತಾ ಗುಲಕಮಲೆ
4 ವಡ್ಡರಪಾಳ್ಯ ..	10 ಕಗ್ಗಲಹಳ್ಳಿ ..	16 ಡಿಟೋ ನೆಲಗುಳಿ
5 ಮುಕ್ಕೊಡ್ಲು ..	11 ಯಡವುಡ ..	17 ಡಿಟೋ ಚಕೂಡಹಳ್ಳಿ
6 ಸುಂಕದಕಟ್ಟೆ (ಬೇಡರಾಕ್) ..	12 ನೆತ್ತಿಗೆರೆ ..	

ಹಾರೋಹಳ್ಳಿ ಹೋಬಳಿ.

18 ಹಾರೋಹಳ್ಳಿ ..	27 ಗೃಜಕೋಲಹಳ್ಳಿ ..	35 ಹುಲಗೊಂಡಹಳ್ಳಿ
19 ಕೋಣಸಂದ್ರ ..	28 ಭೀವಸಂದ್ರ ..	36 ಗಾರೆ ಪಾಳ್ಯ (ಬೇಡರಾಕ್)
20 ತಾಟಕೆರೆ ..	29 ಬನವಾಸಿ ..	37 ಮೇದಮಾರನಹಳ್ಳಿ
21 ಮೂಡೇನಹಳ್ಳಿ ..	30 ಗೊಟ್ಟಿಗೆಹಳ್ಳಿ ..	38 ಹೊಸಕೋಟೆ
22 ಅತ್ತಿಕುಪ್ಪ ..	31 ಬಲಗನಕುಪ್ಪೆ ..	39 ವಡೇರಹಳ್ಳಿ
23 ಕೊಳಲಗೊಂದಿ ..	32 ದೇವಸಂದ್ರ ..	40 ಮಾರಸಂದ್ರ ..
24 ಕಳ್ಳನಕುಪ್ಪ ..	33 ಮಣಿಯಂಬಾಳು (ಬೇಡರಾಕ್) ..	41 ಮಾರಲಗೆರೆ
25 ಜಕ್ಕಸಂದ್ರ ..	34 ಯರ್ರಹಳ್ಳಿ ..	42 ದ್ಯಾವರ ಕಗ್ಗಲಹಳ್ಳಿ
26 ಗಡವನಹಳ್ಳಿ ..		

(2) ಬೆಂಗಳೂರು ತಾಲ್ಲೂಕಿನಿಂದ ಕಾನೆಕುರ್ಕಹಳ್ಳಿ ತಾಲ್ಲೂಕಿಗೆ.

1 ಪುತ್ತಿ ..	2 ನಾಗನಾಯಕನಹಳ್ಳಿ ..	3 ಕಗ್ಗಲಿಪುರ (ಸರ್ವಮಾನ್ಯ)

(3) ಬೆಂಗಳೂರು ಡಿಸ್ಟ್ರಿಕ್ಟ್, ಹೊಸಕೋಟೆ ತಾಲ್ಲೂಕು, ಚನ್ನರಾಯಪಟ್ಟಣದ ಹೋಬಳಿಯಿಂದ ಕೋಲಾರ ಡಿಸ್ಟ್ರಿಕ್ಟ್, ಚಿಕ್ಕಬಳ್ಳಾಪುರ ತಾಲ್ಲೂಕು, ದೇವನಹಳ್ಳಿ ಹೋಬಳಿಗೆ.

1 ಹಾರಲೂರು ..	6 ಯಲಿಯೂರು ..	10 ಗಡ್ಡದನಾಗನಹಳ್ಳಿ
2 ಬೊಮ್ಮನಹಳ್ಳಿ ..	7 ಗೋಕೆರೆ ಬಾಚಹಳ್ಳಿ ..	11 ಅಗಳಕೋಟೆ
3 ಚೆನ್ನಹಳ್ಳಿ ..	8 ದೊಡ್ಡ ತಟ್ಟುವಮಂಗಲ ..	12 ನೊಟ್ಟಬೂರಲು
4 ಪೋಲನಹಳ್ಳಿ ..	9 ತಿಮ್ಮನಹಳ್ಳಿ ..	13 ಚಿಕ್ಕರಾಮನಹಳ್ಳಿ
5 ಮಂಡಿಬೆಲೆ ..		

ತಾರೀಖು 21ನೇ ಮಾರ್ಚ್ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೇದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬವೋಜೇಬ್ ಹುಕುಂ,
ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.